**ಸಿಸಿ ಸಂಖ್ಯೆಃ 11044/2024**

**ಪಿ ಡಬ್ಲ್ಯೂಃ 1**

**ದಿನಾಂಕಃ 09.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್ ಎಮ್ ಎಮ್ ಅವರಿಂದಃ**

1. ನಾನು 5 ನೇ ತರಗತಿಯವರೆಗೆ ಶಾಲೆ ಕಲಿತಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ. ನಾನು 1985 ರಲ್ಲಿ ಜನಿಸಿರುತ್ತೇನೆ. ಆರೋಪಿ ಸಂಬಂಧದಲ್ಲಿ ನನಗೆ ತಮ್ಮನಾಗಬೇಕು. ಈ ಕೇಸ ದಾಖಲಿಸುವ ಪೂರ್ವದಲ್ಲಿ ಆರೋಪಿಗೆ ನಾನು ವಕೀಲರ ಮೂಲಕ ನೊಟೀಸ್ ಕಳುಹಿಸಿದ್ದೆ, ಆದರೆ ದಿನಾಂಕ ನೆನಪಿಲ್ಲ. ಸದರಿ ನೊಟೀಸಿಗೆ ಆರೋಪಿ ತನ್ನ ವಕೀಲರ ಮೂಖಾಂತರ ನನಗೆ ಮತ್ತು ನನ್ನ ವಕೀಲರಿಗೆ ಪ್ರತಿ ಉತ್ತರ ನೀಡಿರುತ್ತಾನೆ ಎಂದರೆ ಸರಿಯಲ್ಲ. ಈ ವಿಚಾರದ ಕುರಿತು ನಾನು ನನ್ನ ವಕೀಲರ ಬಳಿ ವಿಚಾರಣೆ ಮಾಡಿರುವುದಿಲ್ಲ. ಆರೋಪಿ ದಿನಾಂಕ 24-06-2024 ರಂದು ನನಗೂ ಮತ್ತು ನನ್ನ ವಕೀಲರಿಗೂ ಸಹ ಪ್ರತಿ ಉತ್ತರ ನೀಡಿರುತ್ತಾನೆ ಎಂದರೆ ಸರಿ. ಸದರಿ ಪ್ರತಿ ಉತ್ತರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸದರಿ ವಿಚಾರ ನನ್ನ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ಆರೋಪಿ ಏನು ಉತ್ತರ ನೀಡಿರುತ್ತಾನೆ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ಈಗ ತೋರಿಸಲಾದ ಅಂಚೆ ಸ್ವೀಕೃತಿ ಮೇಲೆ ಇರುವ ಸಹಿ ನನ್ನದು ಎಂದರೆ ಸರಿ. ಸದರಿ ಸ್ವೀಕೃತಿಯನ್ನು ನಿಡಿ-1 ಎಂದು ಹಾಗೂ ಸಹಿಯನ್ನು ನಿಡಿ-1 ಎ ಎಂದು ಗುರುತಿಸಲಾಯಿತು. ಈಗ ತೋರಿಸಲಾದ ದಾಖಲೆ ಆರೋಪಿ ನನಗೆ ಕಳುಹಿಸಿದ ಉತ್ತರದ ಪ್ರತಿ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಈಗ ತೋರಿಸಲಾದ ಸ್ವೀಕೃತಿಯ ಪ್ರತಿಯಲ್ಲಿ ನಮಂ ವಕೀಲರ ಸಹಿ ಇದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-3 ಎಂದು, ಸಹಿಯನ್ನು ನಿಡಿ-3 ಎ ಎಂದು ಗುರುತಿಸಲಾಯಿತು.

2. ಪ್ರತಿ ಉತ್ತರದ ನೊಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರಲು ನನ್ನ ಬಳಿ ಯಾವುದೇ ವಿಶೇಷ ಕಾರಣ ಇಲ್ಲ. ಪ್ರತಿ ಉತ್ತರದ ನೊಟೀಸನ್ನು ನ್ಯಾಯಾಲಯಕ್ಕೆ ಹಾಜರುಮಾಡಿದರೆ ಸತ್ಯಾಂಶ ಹೊರಗೆ ಬರುತ್ತದೆ ಎಂದು ನಾನು ಹಾಜರುಪಡಿಸಿಲ್ಲ ಎಂದರೆ

ಸರಿಯಲ್ಲ. ಪ್ರತಿ ಉತ್ತರದ ಅಂಶಗಳನ್ನು ನಾನು ತಿಳಿದುಕೊಂಡಿಲ್ಲ ಮತ್ತು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ.

3. ನಮ್ಮ ಅಜ್ಜನ ಹೆಸರು ಸೋಮಲೆಪ್ಪ ತಂದೆ ಈಶ್ವರಪ್ಪ ಚವ್ಹಾಣ ಅಲಿಯಾಸ್ ಲಮಾಣಿ. ಸದರಿ ಸೋಮಲೆಪ್ಪನ ಹೆಂಡತಿಯ ಹೆಸರು ಗೊತ್ತಿಲ್ಲ. ಸದರಿ ಸೋಮಲೆಪ್ಪನಿಗೆ 1) ಟಾಕರೆಪ್ಪ, 2) ತುಳಜೆಪ್ಪ, 3) ಬಾಬು ಎಂಬ 3 ಜನ ಮಕ್ಕಳು. ಸದರಿ ಟಾಕರೆಪ್ಪನ ಹೆಂಡತಿ ಹೆಸರು ಪೀರವ್ವ. ಸದರಿ ಟಾಕರೆಪ್ಪನಿಗೆ 4 ಜನ ಮಕ್ಕಳು. ಅವರ ಹೆಸರು 1) ಶರಣಮ್ಮ, 2) ಶಿವಪ್ಪ, 3) ಮಾನಪ್ಪ, 4) ಸೋಮಲೆಪ್ಪ. ಸದರಿ ಸೋಮಲೆಪ್ಪ ಎಂದರೆ ನಾನು. ತುಳಜೆಪ್ಪನ ಹೆಂಡತಿಯ ಹೆಸರು ಗಿರಿಯವ್ವ. ಸದರಿ ತುಳಜೆಪ್ಪನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಸದರಿ ತುಳಜೆಪ್ಪನಿಗೆ 9 ಜನ ಮಕ್ಕಳು ಇರಬಹುದು. ಅವರ ಹೆಸರು ದುರ್ಗಪ್ಪ, ಮಂಗಳವ್ವ, ಮಹಾಂತವ್ವ, ಉಮೇಶ, ಶಂಕ್ರಪ್ಪ @ ಸಕರಪ್ಪ (ಆರೋಪಿ), ಶಿವಪ್ಪ, ಪರಮೇಶ್ವರ, ನವೀನಕುಮಾರ ಮತ್ತು ಕವಿತಾ ಎಂದರೆ ಗೊತ್ತಿಲ್ಲ. ಬಾಬುನ ಹೆಂಡತಿಯ ಹೆಸರು ಎಂದರೆ ಗೊತ್ತಿಲ್ಲ. ಬಾಬುನಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ಟಾಕರೆಪ್ಪ ಮತ್ತು ಬಾಬು ತೀರಿಕೊಂಡಿರುತ್ತಾರೆ. ಅವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಬಾಬುನ ಹೆಂಡತಿ ಬದುಕಿದ್ದಾಳೋ ಅಥವಾ ಸತ್ತಿದ್ದಾಳೊ ಎಂದು ಗೊತ್ತಿಲ್ಲ. ನಮ್ಮ ಅಜ್ಜ ಸೋಮಲೆಪ್ಪನ ಮನೆತನದ ವಂಶಾವಳಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಕೂಲಿ ಕೆಲಸ ಮತ್ತು ಟ್ರ್ಯಾಕ್ಟರ ತೆಗೆದುಕೊಂಡು ಕಾರ್ಮಿಕರಿಂದ ಕಬ್ಬು ಕಡಿಯುವುದು ಮತ್ತು ಲೇಬರ ಕೆಲಸ ಮಾಡಿಸುತ್ತೇನೆ. ಕಾರ್ಮಿಕರನ್ನು ದುಡಿಸುವ ಬಗ್ಗೆ ನನ್ನ ಬಳಿ ಪರವಾನಿಗೆ ಇಲ್ಲ. ಕಾರ್ಮಿಕರನ್ನು ಕರೆದುಕೊಂಡು ಹೋಗುವ ಬಗ್ಗೆ ದಾಖಲೆ ಇಲ್ಲ. ಆದರೆ ಫ್ಯಾಕ್ಟರಿಯಿಂದ ಕೇಳಿದರೆ ತಂದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಕಾರ್ಮಿಕರಿಂದ ಕಬ್ಬು ಕಟಾವು ಮಾಡಿಸಲು ರೈತರ ಬಳಿ ಒಪ್ಪಂದ ಮಾಡಿಕೊಂಡಿರುತ್ತೇನೆ. ಸದರಿ ಒಪ್ಪಂದವನ್ನು ಮೌಖಿಕವಾಗಿ ಮಾಡಿಕೊಳ್ಳುತ್ತೇವೆ.

5. ನನಗೆ 2 ಎಕರೆ 20 ಗುಂಟೆ ಜಮೀನು ಇದೆ. ಅದರ ಸರ್ವೆ ನಂ. ಗೊತ್ತಿಲ್ಲ. ಸದರಿ ಜಮೀನು ಒಣಬೇಸಾಯದ ಜಮೀನು. ಸದರಿ ಜಮೀನಿನಲ್ಲಿ ಖರ್ಚು ವೆಚ್ಚ ತೆಗೆದು ವಾರ್ಷಿಕ ಆದಾಯ 50 ರಿಂದ 60 ಸಾವಿರ ಇದೆ. ಎಲ್ಲಾ ಮೂಲಗಳಿಂದ ನನ್ನ ವಾರ್ಷಿಕ ಆದಾಯ 5 ರಿಂದ 6 ಲಕ್ಷ ಇದೆ. ನನ್ನ ಆದಾಯ ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಆ ರೀತಿ ನನ್ನ ಆದಾಯ ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ.

6. ನಾನು ಎಸ್ ಬಿ ಐ ಬ್ಯಾಂಕನಲ್ಲಿ ಒಂದೇ ಖಾತೆಯನ್ನು ಹೊಂದಿರುತ್ತೇನೆ. ಸದರಿ ಖಾತೆಯನ್ನು ನಾನು ಚಿಕ್ಕವನಿದ್ದಾಗ ಮಾಡಿದ್ದು, ದಿನಾಂಕ ನೆನಪು ಇಲ್ಲ. ನಾನು 22 ವರ್ಷ ವಯಸ್ಸಿನವನು ಇದ್ದಾಗ ಸದರಿ ಖಾತೆ ತೆರೆದಿರುತ್ತೇನೆ. ಸದರಿ ಖಾತೆ ಇವತ್ತಿನವರೆಗೂ ಚಾಲ್ತಿಯಲ್ಲಿ ಇದೆ. ಸದರಿ ಖಾತೆ ಹನಮಸಾಗರ ಬ್ರ್ಯಾಂಚ್‌ನಲ್ಲಿ ಇದೆ. ಸದರಿ ಖಾತೆಯ ಸಂಖ್ಯೆ ನನಗೆ ಖಾತೆ ನೋಡದೇ ಹೇಳಲು ಆಗುವುದಿಲ್ಲ. ನನಗೆ ಬಂದಂತಹ ಆದಾಯವನ್ನು ಸದರಿ ಖಾತೆಗೆ ಹಾಕಿ ಮರಳಿ ಪಡೆಯುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಫ್ಯಾಕ್ಟರಿಯಿಂದ ಒಂದು ಖಾತೆ ಇದ್ದು, ನನಗೆ ಬರುವ ಹಣವನ್ನು ಆ ಖಾತೆಗೆ ಹಾಕುತ್ತಾರೆ. ಸದರಿ ಫ್ಯಾಕ್ಟರಿ ಖಾತೆ ಕೆರೂರು ಅಥವಾ ನಿರಾಣಿ ಖಾತೆ ಇರಬಹುದು. ಅದನ್ನು ನಾನು ಹಾಜರುಪಡಿಸಬಲ್ಲೆ. ನನ್ನ ಕಾರ್ಮಿಕರು ದುಡಿದು ಹಣ ಸದರಿ ಖಾತೆಗೆ ಜಮಾ ಆಗುವುದಿಲ್ಲ. ಅವರವರ ಪ್ರತ್ಯೇಕ ಖಾತೆಗೆ ಜಮಾ ಆಗುತ್ತದೆ. ಸದರಿ ಕಾರ್ಮಿಕರಿಗೆ ಒಬ್ಬ ಮೇಸ್ತ್ರಿ ಇದ್ದಾನೆ. ಕಾರ್ಮಿಕರಿಗೆ ಬರುವ ಹಣದ ಕುರಿತು ಮೆಸ್ತ್ರಿಗೆ ಗೊತ್ತಿರುತ್ತದೆ. ನನ್ನ ಗಾಡಿ ಬಾಡಿಗೆ ಮಾತ್ರ ನನಗೆ ಬರುತ್ತದೆ. ಅವರಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ. ಈಗ ಕೆಲಸಗಳು ಕಡಿಮೆ ಇದ್ದ ಕಾರಣ ನನ್ನ ಎಸ್ ಬಿ ಐ ಖಾತೆಯಲ್ಲಿ ಸಾಮಾನ್ಯವಾಗಿ ಈಗ 15 ರಿಂದ 20 ಸಾವಿರ ಉಳಿತಾಯ ಇದೆ. ಸುಮಾರು ಒಂದೂವರೆ ವರ್ಷಗಳ ಹಿಂದೆ ಕಬ್ಬು ಕಟಾವು ಸಮಯದಲ್ಲಿ ನನ್ನ ಖಾತೆಯಲ್ಲಿ 6.50 ರಿಂದ 7 ಲಕ್ಷ ಹಣ ಜಮೆ ಇತ್ತು. ಸದರಿ ಹಣ ನನಗೆ ವೈಯಕ್ತಿಕವಾಗಿ ಜಮೆ ಆದ ಹಣ. ಸುಮಾರು ಒಂದೂವರೆ ವರ್ಷಗಳ ಹಿಂದೆ ನಾನು 6.50 ರಿಂದ 7 ಲಕ್ಷ ಹಣ ಆದಾಯ ಹೊಂದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಮೇಲೆ ಹೇಳಿದ ಎರಡೂವರೆ ಎಕರೆ ಜಮೀನು ನನಗೆ ಪಿತ್ರಾರ್ಜಿತವಾಗಿ ಬಂದ ಜಮೀನು. ಸದರಿ ಜಮೀನು ನನ್ನ ಅಜ್ಜನಿಂದ ಬಂದಿದ್ದು. ನನ್ನ ಅಜ್ಜನಿಗೆ ಸದರಿ ಜಮೀನನ್ನು ಹೊರತುಪಡಿಸಿ ಬೇರೆ ಜಮೀನು ಇರಲಿಲ್ಲ.

**ಮುಂದುವರೆದ_ಪಾಟೀ_ಸವಾಲಿಗೆ_ಆರೋಪಿ_ಪರ_ವಕೀಲರು_ಸಮಯಾವಕಾಶ ಕೇಳಿದ್ದರಿಂದ_ಕಾಲಾವಕಾಶ_ನೀಡಲಾಯಿತು._**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ. ನ್ಯಾ.ದಂಡಧಿಕಾರಿಗಳು,ಕುಷ್ಟಗಿ